# ವಚನ ಸಾಹಿತ್ಯದಲ್ಲಿ ಪರಂಪರೆ ಹಾಗೂ ಆಧುನಿಕ ಚಿಂತನೆಗಳು

**ಶೆಲ್ವಿ ಬಾಲಕೃಷ್ಣನ್[1], ಲೇಖನ ಶ್ರೀ[2] & ಚಂದನ ಎಚ್.ಎಸ್.[3]**

[1]ಕನ್ನಡ ಸಹಾಯಕ ಪ್ರಾಧ್ಯಾಪಕರು, ಕಲಾ ಮತ್ತು ಮಾನವಿಕ ವಿಭಾಗ, ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು.

[2]ಬಿ.ಕಾಂ. ದ್ವಿತೀಯ ಸೆಮಿಸ್ಟರ್, ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು.

[3]ಬಿ.ಕಾಂ. ದ್ವಿತೀಯ ಸೆಮಿಸ್ಟರ್, ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು.

DOI: https://doi.org/10.5281/zenodo.15795820

## ABSTRACT:

ವಚನ ಸಾಹಿತ್ಯದಲ್ಲಿ ಪರಂಪರೆ ಹಾಗೂ ಆಧುನಿಕ ಚಿಂತನೆಗಳು ಎಂಬ ವಿಚಾರಕ್ಕೆ ಸಂಬಂಧಪಟ್ಟಂತೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ನಡುಗನ್ನಡ ಸಾಹಿತ್ಯದ ಮೂಲಕ ದೇಶೀ ಛಂದಸ್ಸಿನ ಕಡೆಗೆ ಗಮನ ಹರಿಸಿದ ಕಾಲಘಟ್ಟದಲ್ಲಿ ಹಲವಾರು ಕವಿಗಳು ದೇಶೀ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಕನ್ನಡ ಭಾಷೆಯನ್ನು ಬೆಳೆಸಿ ಶ್ರೀಮಂತಗೊಳಿಸುತ್ತಾರೆ. ಇಂತಹ ಆಶಾದಾಯಕ ಪರಿವರ್ತನೆಯನ್ನು ಮಾಡಿದ ಘನತೆಯು ನಮ್ಮ ವಚನಕಾರರಿಗೆ ಸಲ್ಲುತ್ತದೆ ಎಂಬುದನ್ನು ತಿಳಿಯಬಹುದಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಒಂದು ಹೊಸ ಕ್ರಾಂತಿಯನ್ನೇ ಉಂಟುಮಾಡಿದ ವಚನ ಸಾಹಿತ್ಯದ ಉಗಮವು ಭಾಗವತ ಪಂಥದ ಬುಡವನ್ನೇ ಅಲುಗಾಡಿಸುವ ಮೂಲಕ ಅದನ್ನು ಸಂಪೂರ್ಣವಾಗಿ ಮರೆಮಾಡುವ ಮುಖೇನ ವಚನ ಸಾಹಿತ್ಯವು ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡಿರುವುದನ್ನು ನಾವು ಗಮನಿಸಬಹುದಾಗಿದೆ. ಇಲ್ಲಿ ಪ್ರಮುಖವಾಗಿ ಸಾಹಿತ್ಯವೆಂಬುದು ಒಂದು ನಿಂತ ನೀರಲ್ಲ; ಅದು ನಿರಂತರವಾಗಿ ಹರಿಯುವ ಮೂಲಕ ಹೊಸದಾಗಿ ಬದಲಾವಣೆಗಳನ್ನು ನಾವು ಕಾಣಬಹುದಾಗಿದೆ. ಕಾಲಕಾಲಕ್ಕೆ ಮಾನವ ಸಮಾಜವು ಬದಲಾವಣೆಗಳನ್ನು ಹೊಂದುತ್ತಿರುವಂತೆಯೇ ಸಾಹಿತ್ಯವೂ ಕೂಡ ಬದಲಾವಣೆಗಳನ್ನು ಹೊಂದುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಇಂತಹ ಬದಲಾವಣೆಗಳು ಎಂಬುದು ಏಕಕಾಲಕ್ಕೆ ಆಗುವಂತಹುದು ಸಾಧ್ಯವಿಲ್ಲ, ಇದಕ್ಕೆ ಬಹುಕಾಲಗಳ ಅವಶ್ಯಕತೆ ಎಂಬುದು ಇರುತ್ತದೆ. ನಮ್ಮ ಕನ್ನಡ ಸಾಹಿತ್ಯದಲ್ಲಿಯೂ ಕೂಡ ಶತಮಾನದಲ್ಲಿ ಮಹತ್ತರವಾದ ಬದಲಾವಣೆಗಳ ಮೂಲಕ ಬಂದು ಬಹುದೊಡ್ಡ ವಚನಕಾರರ ಕ್ರಾಂತಿಯೇ ನಡೆದು ಹೋಗಿತ್ತು ಎಂಬುದನ್ನು ನಾವು ಗಮನಿಸಬಹುದಾಗಿದೆ.

ವಚನ ಸಾಹಿತ್ಯದಲ್ಲಿ ವಚನಕಾರರು ಸರಳವೂ ಸುಂದರವೂ ಆದ ಮತ್ತು ಜನಸಾಮಾನ್ಯರ ಮನಮುಟ್ಟುವಂತಹ ವಚನಗಳನ್ನು ರಚಿಸಿದರು. ಈ ವಚನಗಳೆಲ್ಲವೂ ಕನ್ನಡಿಗರ ಆಸ್ತಿ ಎಂದರೂ ತಪ್ಪಾಗಲಾರದು. ಪ್ರತಿಯೊಬ್ಬ

ಶಿವಶರಣ ಹಾಗೂ ಶರಣೆಯರು ಹಾಡಿದಂತಹ ವಚನಗಳು ಎಲ್ಲವೂ ಗದ್ಯ ರೂಪದ ಮಾದರಿಯಲ್ಲಿಯೇ ಇದ್ದ ಕಾರಣ ಅವುಗಳಿಗೆ ವಚನಗಳೆಂಬ ಹೆಸರು ರೂಢಿಗೆ ಬಂದಿರಬಹುದು ಎಂಬುದಾಗಿ ತಿಳಿಯಬಹುದಾಗಿದೆ. ವಚನಗಳೆಲ್ಲವೂ ಆಧ್ಯಾತ್ಮಪರವಾದವುಗಳಾಗಿವೆ. ವಚನಕಾರರ ಮೂಲ ಉದ್ದೇಶ ಸಮಾಜದಲ್ಲಿ ಸಮಾನತೆ, ಪ್ರೀತಿ, ವಿಶ್ವಾಸ, ಭ್ರಾತೃತ್ವದ ಅಂಶಗಳನ್ನು ಮೂಡಿಸುವುದೇ ಆಗಿದೆ. ಅಂಧಕಾರ ಅಥವಾ ಅಜ್ಞಾನ ಹಾಗೂ ಮೂಢತನದಲ್ಲಿ ಮುಳುಗಿರುವ ಜನರನ್ನು ಬಡಿದೆಚ್ಚರಿಸುವ ಮೂಲಕ ಅವರಿಗೆ ಜ್ಞಾನೋದಯವನ್ನು ಮೂಡಿಸುವ ಕಾರ್ಯ ವೈಖರಿಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಒಂದು ಉತ್ತಮ ಮಾರ್ಗದಲ್ಲಿ ತನ್ನ ಬದುಕನ್ನು ಸಾಗಿಸುವ ಮೂಲಕ ತಮ್ಮ ಆತ್ಮೋದ್ಧಾರದ ಹೆದ್ದಾರಿಯಲ್ಲಿ ನಡೆಯಬೇಕು ಎಂಬುದೇ ಶರಣರ ಆಶಯ ಆಗಿರುತ್ತದೆ. ಸಮಾಜದಲ್ಲಿ ಪ್ರತಿಯೊಬ್ಬ ಮಾನವನ ಬದುಕು ಕೂಡ ಸಾರ್ಥಕವಾಗಬೇಕು ಎಂಬುದಾಗಿ ಆಶಿಸುವವರು ನಮ್ಮ ವಚನಕಾರರು. ವಚನ ಸಾಹಿತ್ಯವು ನಮ್ಮ ಭಾರತೀಯ ಧಾರ್ಮಿಕತೆ ಮತ್ತು ತಾತ್ವಿಕತೆಗಳ ಪರಂಪರೆಯ ವಿಚಾರಗಳನ್ನು ಪರಿಚಯಿಸುತ್ತಲೇ, ಆಧುನಿಕ ಸಮಾಜಕ್ಕೆ ಬೇಕಾದ ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಪ್ರೀತಿ, ಸೌಹಾರ್ದತೆ ಎಂಬ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಒಟ್ಟಾರೆ ವಚನ ಸಾಹಿತ್ಯವು ಪರಂಪರೆಯ ಮೂಲ ಅಡಿಪಾಯಗಳ ಮೇಲೆ ನಿಂತು ಸಮಾಜದಲ್ಲಿ ತನ್ನ ವಿಶಿಷ್ಟ ಚಿಂತನೆಗಳ ಮೂಲಕ ಹೊಸತನವನ್ನು ಮೂಡಿಸುವಲ್ಲಿ ತನ್ನದೇ ಆದ ಛಾಪನ್ನು ಹೊಂದಿದ್ದು ಮೌಲ್ಯಗಳ ಬೆಳಕನ್ನು ಚೆಲ್ಲುವ ಪ್ರಯತ್ನವನ್ನು ಮಾಡಿರುವುದನ್ನು ಕಾಣಬಹುದಾಗಿದೆ.

## KEYWORDS:

ಕಾಯಕ ತತ್ವ, ಪರಿಶುದ್ಧತೆ, ಭಕ್ತಿಯ ವಿಚಾರ, ಲಿಂಗ ಧಾರಣೆಯ ಶ್ರೇಷ್ಠತೆ, ನೈತಿಕ ವಿಚಾರಧಾರೆ, ಶರಣರ ತತ್ವ.

**ಪೀಠಿಕೆ:**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ನಡುಗನ್ನಡ ಸಾಹಿತ್ಯದ ಮೂಲಕ ದೇಶೀ ಛಂದಸ್ಸಿನ ಕಡೆಗೆ ಗಮನ ಹರಿಸಿದ ಕಾಲಘಟ್ಟದಲ್ಲಿ ಹಲವಾರು ಕವಿಗಳು ದೇಶೀ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಕನ್ನಡ ಭಾಷೆಯನ್ನು ಬೆಳೆಸಿ ಶ್ರೀಮಂತಗೊಳಿಸುತ್ತಾರೆ. ಇಂತಹ ಆಶಾದಾಯಕ ಪರಿವರ್ತನೆಯನ್ನು ಮಾಡಿದ ಘನತೆಯು ನಮ್ಮ ವಚನಕಾರರಿಗೆ ಸಲ್ಲುತ್ತದೆ ಎಂಬುದನ್ನು ಹೇಳಲು ಹರ್ಷಿಸುತ್ತೇನೆ. ಹನ್ನೆರಡನೆಯ ಶತಮಾನದಲ್ಲಿ ಒಂದು ಹೊಸ ಕ್ರಾಂತಿಯನ್ನೇ ಉಂಟುಮಾಡಿದ ವಚನ ಸಾಹಿತ್ಯದ ಉಗಮವು ಭಾಗವತ ಪಂಥದ ಬುಡವನ್ನೇ ಅಲುಗಾಡಿಸುವ ಮೂಲಕ ಅದನ್ನು ಸಂಪೂರ್ಣವಾಗಿ ಮರೆಮಾಡುವ ಮುಖೇನ ವಚನ ಸಾಹಿತ್ಯವು ತನ್ನ ಪ್ರಭುತ್ವವನ್ನು

ಸ್ಥಾಪಿಸಿಕೊಂಡಿರುವುದನ್ನು ನಾವು ಗಮನಿಸಬಹುದಾಗಿದೆ. ಇಲ್ಲಿ ಪ್ರಮುಖವಾಗಿ ಸಾಹಿತ್ಯವೆಂಬುದು ಒಂದು ನಿಂತ ನೀರಲ್ಲ; ಅದು ನಿರಂತರವಾಗಿ ಹರಿಯುವ ಮೂಲಕ ಹೊಸದಾಗಿ ಬದಲಾವಣೆಗಳನ್ನು ನಾವು ಕಾಣಬಹುದಾಗಿದೆ. ಕಾಲಕಾಲಕ್ಕೆ ಮಾನವ ಸಮಾಜವು ಬದಲಾವಣೆಗಳನ್ನು ಹೊಂದುತ್ತಿರುವಂತೆಯೇ ಸಾಹಿತ್ಯವೂ ಕೂಡ ಬದಲಾವಣೆಗಳನ್ನು ಹೊಂದುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಇಂತಹ ಬದಲಾವಣೆಗಳು ಎಂಬುದು ಏಕಕಾಲಕ್ಕೆ ಆಗುವಂತಹುದು ಸಾಧ್ಯವಿಲ್ಲ, ಇದಕ್ಕೆ ಬಹುಕಾಲಗಳ ಅವಶ್ಯಕತೆ ಎಂಬುದು ಇರುತ್ತದೆ. ನಮ್ಮ ಕನ್ನಡ ಸಾಹಿತ್ಯದಲ್ಲಿಯೂ ಕೂಡ ಹನ್ನೆರಡನೆಯ ಶತಮಾನದಲ್ಲಿ ಮಹತ್ತರವಾದ ಬದಲಾವಣೆಗಳ ಮೂಲಕ ಬಂದು ಬಹುದೊಡ್ಡ ವಚನಕಾರರ ಕ್ರಾಂತಿಯೇ ನಡೆದು ಹೋಗಿತ್ತು ಎಂಬುದನ್ನು ನಾವು ಗಮನಿಸಬಹುದಾಗಿದೆ.

ವಚನ ಸಾಹಿತ್ಯದಲ್ಲಿ ವಚನಕಾರರು ಸರಳವೂ ಸುಂದರವೂ ಆದ ಮತ್ತು ಜನಸಾಮಾನ್ಯರ ಮನಮುಟ್ಟುವಂತಹ ವಚನಗಳನ್ನು ರಚಿಸಿದರು. ಈ ವಚನಗಳೆಲ್ಲವೂ ಕನ್ನಡಿಗರ ಆಸ್ತಿ ಎಂದರೂ ತಪ್ಪಾಗಲಾರದು. ಪ್ರತಿಯೊಬ್ಬ ಶಿವಶರಣ ಹಾಗೂ ಶರಣೆಯರು ಹಾಡಿದಂತಹ ವಚನಗಳು ಎಲ್ಲವೂ ಗದ್ಯ ರೂಪದ ಮಾದರಿಯಲ್ಲಿಯೇ ಇದ್ದ ಕಾರಣ ಅವುಗಳಿಗೆ ವಚನಗಳೆಂಬ ಹೆಸರು ರೂಢಿಗೆ ಬಂದಿರಬಹುದು ಎಂಬುದಾಗಿ ತಿಳಿಯಬಹುದಾಗಿದೆ. ವಚನಗಳೆಲ್ಲವೂ ಆಧ್ಯಾತ್ಮಪರವಾದವುಗಳಾಗಿವೆ. ವಚನಕಾರರ ಮೂಲ ಉದ್ದೇಶ ಸಮಾಜದಲ್ಲಿ ಸಮಾನತೆ, ಪ್ರೀತಿ, ವಿಶ್ವಾಸ, ಭ್ರಾತೃತ್ವದ ಅಂಶಗಳನ್ನು ಮೂಡಿಸುವುದೇ ಆಗಿದೆ. ಅಂಧಕಾರ ಅಥವಾ ಅಜ್ಞಾನ ಹಾಗೂ ಮೂಢತನದಲ್ಲಿ ಮುಳುಗಿರುವ ಜನರನ್ನು ಬಡಿದೆಚ್ಚರಿಸುವ ಮೂಲಕ ಅವರಿಗೆ ಜ್ಞಾನೋದಯವನ್ನು ಮೂಡಿಸುವ ಕಾರ್ಯ ವೈಖರಿಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಒಂದು ಉತ್ತಮ ಮಾರ್ಗದಲ್ಲಿ ತನ್ನ ಬದುಕನ್ನು ಸಾಗಿಸುವ ಮೂಲಕ ತಮ್ಮ ಆತ್ಮೋದ್ಧಾರದ ಹೆದ್ದಾರಿಯಲ್ಲಿ ನಡೆಯಬೇಕು ಎಂಬುದೇ ಶರಣರ ಆಶಯ ಆಗಿರುತ್ತದೆ. ಸಮಾಜದಲ್ಲಿ ಪ್ರತಿಯೊಬ್ಬ ಮಾನವನ ಬದುಕು ಕೂಡ ಸಾರ್ಥಕವಾಗಬೇಕು ಎಂಬುದಾಗಿ ಆಶಿಸುವವರು ನಮ್ಮ ವಚನಕಾರರು. ತಮ್ಮ ಬದುಕಿನಲ್ಲಿ ಯಾವುದೋ ಒಂದು ಸಂದರ್ಭದಲ್ಲಿ ಸ್ವತಃ ತಾವು ಅನುಭವಿಸಿದಂತಹ ಅಥವಾ ಕಣ್ಣಾರೆ ಕಂಡಂತಹ ಕೆಲವು ವಿಚಾರಧಾರೆಗಳು ಅಥವಾ ತಮ್ಮ ಮನಸ್ಸಿಗೆ ಮೂಡಿದ ಭಾವನೆಗಳು ವಚನ ಸಾಹಿತ್ಯದ ಅಡಿಯಲ್ಲಿ ವಚನಕಾರರ ಬಾಯಿಂದ ಹೊರ ಬರುವುದನ್ನು ನಾವು ಗಮನಿಸಬಹುದಾಗಿದೆ. ವಚನಕಾರರ ಎಲ್ಲಾ ವಚನಗಳು ಸ್ವಾಭಾವಿಕವಾಗಿ ತಮ್ಮ ಅನುಭವದಿಂದ ಇಳಿದು ಬಂದ ಕಾರಣ ಅದು ಜನಸಾಮಾನ್ಯರಿಗೆ ಬಹಳ ಬೇಗ ಸರಳವಾಗಿ, ಸ್ಪಷ್ಟವಾಗಿ ಅರ್ಥವಾಗುತ್ತಿತ್ತು.

ಉಪನಿಷತ್ತಿನ ತತ್ವಗಳೇ ಇಲ್ಲಿ ಸರಳವೂ ಸುಲಭವೂ ಆದ ಅಚ್ಚಗನ್ನಡದ

ವಚನರೂಪದಲ್ಲಿ ಮೂಡಿಬಂದಿರುವುದರಿಂದಲೇ ಇವುಗಳನ್ನು ಕನ್ನಡದ ಉಪನಿಷತ್ತುಗಳೆಂದು ಕರೆದಿದ್ದಾರೆ. ವೇದೋಪನಿಷತ್ತುಗಳು ನಿರಂತರವಾಗಿ ಸುರಿಸುತ್ತಿರುವ ನಿತ್ಯಸತ್ಯದ ದೇವಗಂಗೆ ಅನುಭವಿಗಳು. ನಮಗೀಗ ದೊರೆತಿರುವಂತೆ ದೇವರ ದಾಸಿಮಯ್ಯನವರು ಮೊದಲನೆಯ ವಚನಕಾರ ಎಂಬುದನ್ನು ಕಾಣಬಹುದಾಗಿದೆ. ವಚನ ಸಾಹಿತ್ಯವು ನಮ್ಮ ಭಾರತೀಯ ಧಾರ್ಮಿಕತೆ ಮತ್ತು ತಾತ್ವಿಕತೆಗಳ ಪರಂಪರೆಯ ವಿಚಾರಗಳನ್ನು ಪರಿಚಯಿಸುತ್ತಲೇ, ಆಧುನಿಕ ಸಮಾಜಕ್ಕೆ ಬೇಕಾದ ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಪ್ರೀತಿ, ಸೌಹಾರ್ದತೆ ಎಂಬ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಒಟ್ಟಾರೆ ವಚನ ಸಾಹಿತ್ಯವು ಪರಂಪರೆಯ ಮೂಲ ಅಡಿಪಾಯಗಳ ಮೇಲೆ ನಿಂತು ಸಮಾಜದಲ್ಲಿ ತನ್ನ ವಿಶಿಷ್ಟ ಚಿಂತನೆಗಳ ಮೂಲಕ ಹೊಸತನವನ್ನು ಮೂಡಿಸುವಲ್ಲಿ ತನ್ನದೇ ಆದ ಛಾಪನ್ನು ಹೊಂದಿದ್ದು ಮೌಲ್ಯಗಳ ಬೆಳಕನ್ನು ಚೆಲ್ಲುವ ಪ್ರಯತ್ನವನ್ನು ಮಾಡಿರುವುದನ್ನು ನಾವು ನೋಡಬಹುದಾಗಿದೆ.

**ಎತ್ತಣ ಮಾಮರ ಎತ್ತಣ ಕೋಗಿಲೆ**
**ಎತ್ತಣ ಮಾಮರ ಎತ್ತಣ ಕೋಗಿಲೆ**
**ಎತ್ತಣಿಂದೆತ್ತ ಸಂಬಂಧವಯ್ಯ?**
**ಬೆಟ್ಟದ ನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು**
**ಎತ್ತಣಿಂದೆತ್ತ ಸಂಬಂಧವಯ್ಯ?**
**ಗುಹೇಶ್ವರಲಿಂಗಕ್ಕೆಯಾ ಎನಗೆಯಾ**
**ಎತ್ತಣಿಂದೆತ್ತ ಸಂಬಂಧವಯ್ಯ?**

ಈ ಸಾಲುಗಳು ಜೀವನದ ಗಾಢ ಅರ್ಥವನ್ನು ಒಳಗೊಂಡಿದೆ. ಮಾಮರ ಎಂಬುದು ದೊಡ್ಡ ಮರ, ಕೋಗಿಲೆಯು ಸುಮಧುರ ಕಂಠವುಳ್ಳ ಒಂದು ಪಕ್ಷಿ. ಪರಿಸರದಲ್ಲಿ ಎಷ್ಟೋ ಬಗೆಯ ಮರಗಳಿದ್ದರೂ ಸಹ ಕೋಗಿಲೆಯು ಮಾಮರದ ಮೇಲೆಯೇ ಕೂತು ಹಾಡುತ್ತದೆ. ಇದು ಕೋಗಿಲೆ ಹಾಗೂ ಮರಕ್ಕೆ ಇರುವ ಸಂಬಂಧ. ಎಲ್ಲಿಂದಲೋ ಬಂದ ಕೋಗಿಲೆ ಹಾಗೂ ಎಲ್ಲೋ ಹುಟ್ಟಿ ಬೆಳೆದ ಮರದ ನಡುವೆ ಬೆಳೆದ ಸಂಬಂಧವನ್ನು ಅಲ್ಲಮಪ್ರಭು ಹೇಳುತ್ತಿದ್ದಾರೆ.

ಬೆಟ್ಟದ ಮೇಲೆ ಸಿಗುವ ನೆಲ್ಲಿಕಾಯಿಗೂ, ಸಮುದ್ರದೊಳಗೆ ಇರುವ ಉಪ್ಪಿಗೂ ಎಷ್ಟೊಂದು ವ್ಯತ್ಯಾಸವಿದೆ. ಎರಡು ರುಚಿಗೆ ಸಂಬಂಧಿಸಿದ್ದರೂ ವ್ಯತ್ಯಾಸ ಅಜಗಜಾಂತರ. ವಿರೋಧ ತೀವ್ರ ವಿಭಿನ್ನ ಕಲ್ಪನೆಗಳು. ಅದೆಂದೂ ಬೇರೆಯಾಗಿ ಕಂಡರೂ ಸಹ ಅವುಗಳಲ್ಲಿ ಆಂತರಿಕ ಸಂಬಂಧವಿರುತ್ತದೆ. ಎಲ್ಲಿಂದ ಎಲ್ಲಿಗೆ ಸಂಬಂಧ ಎಂದು ಕೇಳುತ್ತಿದ್ದಾರೆ. ಅಲ್ಲಮಪ್ರಭು 11ನೇ ಶತಮಾನದ ಲಿಂಗಾಯತ ಸಂತರು ಹಾಗೂ ವಚನಕಾರರು. ಶಿವಶರಣರ ಸಲುವಾಗಿ ಅನೇಕ ವಚನಗಳನ್ನು ಸಾರಿದ್ದಾರೆ. ಅದರಲ್ಲಿ ಇದು ಒಂದಾಗಿದೆ.

ಬಸವಣ್ಣನವರು ಹೇಳುತ್ತಾರೆ – ದೇವರು ನಿನ್ನ ನಂಬಿಕೆಯಲ್ಲಿ ನಿನ್ನಲ್ಲಿಯೇ ಇರುತ್ತಾನೆ. ನಿನ್ನ ನಿಜವಾದ ನಡತೆಯಲ್ಲಿ ಅಂದರೆ ನಿನ್ನ ನಿಷ್ಠೆಯುಳ್ಳ, ಸತ್ಯವುಳ್ಳ ನಿನ್ನ ಬಾಳಿನಲ್ಲಿ ಕಂಡುಕೊಳ್ಳಬಹುದು. ದೇವರು ಯಾವುದೇ ವಸ್ತುಗಳಲ್ಲಿ ಅಥವಾ ಹೊರಗಿಲ್ಲ, ದೇವರು ನಮ್ಮೊಳಗೇ ಇರುತ್ತಾರೆ. ನಾವು ಶುದ್ಧ ಮನಸ್ಸಿನಿಂದ ಮತ್ತು ನಿಷ್ಠೆಯಿಂದ ಬಾಳುವ ಜೀವನವೊಂದರ ಮೂಲಕ ದೇವರನ್ನು ಕಾಣಬಹುದು. ಪ್ರತಿಯೊಬ್ಬ ಮನುಷ್ಯನಲ್ಲಿಯೂ ದೇವತ್ವವಿದೆ ಎಂಬುದನ್ನು ಶರಣ ತತ್ವವು ಪ್ರತಿಪಾದಿಸುತ್ತಿದೆ. ವ್ಯಕ್ತಿಯ ನಡತೆ, ನಂಬಿಕೆ ಮತ್ತು ನೈತಿಕತೆಯ ಮೂಲಕ ದೇವರನ್ನು ಕಾಣಲು ಸಾಧ್ಯವಿದೆ ಎಂಬ ತತ್ವವನ್ನು ಬೋಧಿಸುತ್ತದೆ. ಬಸವಣ್ಣನವರ ಈ ತತ್ವವು ಇಂದಿಗೂ ಕೂಡ ಪ್ರಖ್ಯಾತವಾಗಿದೆ. ಏಕೆಂದರೆ ಇದು ವ್ಯಕ್ತಿಯ ಒಳ ಜೀವನದ ಪವಿತ್ರತೆಯು ದೇವಭಕ್ತಿಯ ಮೂಲ ಎಂದು ಸಾರುತ್ತದೆ.

**ಅರ್ಥರೇಖೆಯಿದ್ದಲ್ಲಿ ಫಲವೇನು?**
**ಅರ್ಥರೇಖೆಯಿದ್ದಲ್ಲಿ ಫಲವೇನು?**
**ಆಯುಷ್ಯರೇಖೆ ಇಲ್ಲದ ಕೈಯಲ್ಲಿ ಚಂದ್ರಾಯುಧವಿದ್ದುದಲ್ಲಿ ಫಲವೇನು?**
**ಅಂಧಕನ ಕೈಯಲ್ಲಿ ದರ್ಪಣವಿದ್ದಲ್ಲಿ ಫಲವೇನು?**
**ನಮ್ಮ ಕೂಡಲಸಂಗಮದ ಶರಣರನರಿಯದವರ ಕೈಯಲ್ಲಿ ಲಿಂಗವಿದ್ದು ಫಲವೇನು**
**ಶಿವಪಥವನರಿಯದನ್ನಕ?**

ಶರಣರ ಮಹತ್ವವನ್ನು ಅರಿಯದಿದ್ದರೆ ಏನು ಪ್ರಯೋಜನವಿಲ್ಲ. ಶರಣರನ್ನು ಮೊದಲೇ ತಿಳಿದು ಅವರನ್ನು ಅರಿಯುವುದು ಮುಖ್ಯ. ಅವನಿಗೆ ಆಯುಷ್ಯವಿಲ್ಲದಿದ್ದರೆ ಆ ಸಂಪತ್ತಿನಿಂದ ಏನು ಪ್ರಯೋಜನ? ಇಲ್ಲಿ ಬಸವಣ್ಣನವರು ಸಂಪತ್ತು ಇದ್ದರೂ ಜೀವನವಿಲ್ಲದಿದ್ದರೆ ವ್ಯರ್ಥ. ಅದೇ ರೀತಿ ಬಾಹ್ಯ ಲಿಂಗದ ಧಾರಣೆ ಇದ್ದರೂ ಅದನ್ನು ಅರ್ಥ ಮಾಡಿಕೊಳ್ಳುವ ಜೀವಂತ ನಂಬಿಕೆ ಇಲ್ಲದಿದ್ದರೆ ಅದು ಫಲ ಕೊಡುವುದಿಲ್ಲ.

ಪವಿತ್ರವಾದ ಆಯುಧವೊಂದು ಅಶುದ್ಧ ಮತ್ತು ಜ್ಞಾನವಿಲ್ಲದ ಪ್ರಾಣಿಯ ಕೈಯಲ್ಲಿ ಇದ್ದರೆ ಅದು ಪವಿತ್ರ ಕಾರ್ಯಕ್ಕೆ ಬಳಸಲಾಗುವುದಿಲ್ಲ. ಹೇಡಿಯು ಅದನ್ನು ತನ್ನ ಇಷ್ಟದ ರೀತಿಯಲ್ಲಿ ಬಳಸಲು ಯೋಗ್ಯನಲ್ಲ. ಅದೇ ರೀತಿ ಲಿಂಗವು ಭಕ್ತಿಯ ಪವಿತ್ರತೆಯ ಸಂಕೇತವಾದರೂ ಅದನ್ನು ಧರಿಸುವವನಿಗೆ ಶುದ್ಧ ಮನಸ್ಸಿಲ್ಲದಿದ್ದರೆ ವ್ಯರ್ಥ. ಅಂಧನಿಗೆ ಕೈಯಿಲ್ಲದ ಕಾರಣದಿಂದ ಅವನ ಕೈಯಲ್ಲಿ ದರ್ಪಣ ಅಂದರೆ ಕನ್ನಡಿಯಿದ್ದು ಫಲವಿಲ್ಲ. ಅವನ ಕೈಯಲ್ಲಿ ದರ್ಪಣ ಇದ್ದರೂ ಅವನ ಮುಖ ನೋಡಿಕೊಳ್ಳಲು ಸಾಧ್ಯವಿಲ್ಲ. ಭಕ್ತಿಯ ರೂಪವಿದ್ದರೂ ಸಹ ಅದರಲ್ಲಿನ ಮರ್ಮವನ್ನು ಗ್ರಹಿಸಲು ಆಂತರಿಕ ದೃಷ್ಟಿಯಿಲ್ಲದಿದ್ದರೆ (ಜ್ಞಾನ) ಅದು ಫಲವಿಲ್ಲದಂತೆ.

ಮಂಕುತನ – ಇದರ ಅರ್ಥ ಬುದ್ಧಿ ಹೀನ. ಅಂತಹವನ ಕೈಯಲ್ಲಿ ಅಮೂಲ್ಯ ರತ್ನವಿದ್ದರೂ ವ್ಯರ್ಥ. ಹಾಗೆಯೇ ಅಂತಹವನು ಲಿಂಗ ಧರಿಸಿದರೂ ಅದು

ಅಲಂಕಾರಕ್ಕೆ ಮಾತ್ರ. ಅದರ ಬೆಲೆ ಅವನಿಗೆ ತಿಳಿಯುವುದಿಲ್ಲ. ಅದರಿಂದ ಭಕ್ತನಿಗೆ ಲಾಭವಿಲ್ಲ. ಕೇವಲ ಲಿಂಗವನ್ನು ಧರಿಸಿದರೆ ಅವನು ಶರಣನಾಗಲಾರನು. ಶರಣರ ತತ್ವ, ಭಕ್ತಿ, ನೈತಿಕತೆ, ಶುದ್ಧತೆ ಇವುಗಳನ್ನು ಅರಿಯದೆ ಅಥವಾ ಅನುಸರಿಸದೆ ಲಿಂಗ ಧರಿಸಿದರೆ ಅದು ಹೊರಗಿನ ಅಲಂಕಾರ ಮಾತ್ರ. ದೇವರು ಇದರ ಮೂಲಕ ಭಕ್ತರ ಹೃದಯವನ್ನು ನೋಡುತ್ತಾನೆ. ಇಂತಹವರಿಗೆ ಶಿವನ ಮಾರ್ಗದಲ್ಲಿ ಸಾಗುವ ಶಕ್ತಿ ಇಲ್ಲ. ಅವರು ಮುಕ್ತಿ ಪಡೆಯಲಾರರು. ನಿಜವಾದ ಭಕ್ತಿಗೆ ಮಾತ್ರ ಶಿವನು ಒಲಿಯುವನು, ಇಲ್ಲದಿದ್ದರೆ ಒಲಿಯಲಾರ.

ಗುಹೇಶ್ವರ ಲಿಂಗ ಅಂದರೆ ಶಿವನ ರೂಪ, ಶಿವಲಿಂಗ. ನಾವು ಮನುಷ್ಯರು ಶಿವನನ್ನು ಆರಾಧಿಸುತ್ತೇವೆ, ನಮ್ಮ ಬದುಕಿನಲ್ಲಿ ನೆಮ್ಮದಿಯನ್ನು ಹುಡುಕುತ್ತೇವೆ. ಈ ಜಗದಲ್ಲಿ ಬಹುತೇಕ ವಿಷಯಗಳು ಅರ್ಥವಿಲ್ಲದಂತೆ ಕಾಣಬಹುದು. ಶಿವನಿಗೂ ನನಗೂ ಯಾವ ಸಂಬಂಧ ಎಂದು ಪ್ರಶ್ನಿಸುತ್ತಿದ್ದಾರೆ. ಶಿವನಲ್ಲಿ ತಲ್ಲೀನನಾದವನಿಗೆ ಮುಕ್ತಿ ಖಚಿತವೆಂದು ಹೇಳುತ್ತಿದ್ದಾರೆ.

**ಹೆಣ್ಣಿಗಾಗಿ ಸತ್ತವರು ಕೋಟಿ**
**ಹೆಣ್ಣಿಗಾಗಿ ಸತ್ತವರು ಕೋಟಿ**
**ಮಣ್ಣಿಗಾಗಿ ಸತ್ತವರು ಕೋಟಿ**
**ಹೊನ್ನಿಗಾಗಿ ಸತ್ತವರು ಕೋಟಿ, ಗುಹೇಶ್ವರ!**
**ನಿಮಗಾಗಿ ಸತ್ತವರಾರನೂ ಕಾಣೆ.**

ಈ ವಚನವು ಹೆಣ್ಣಿಗಾಗಿ ನಡೆದ ರಾಮಾಯಣ, ಮಣ್ಣಿಗಾಗಿ ನಡೆದ ಮಹಾಭಾರತ, ಹೊನ್ನಿಗಾಗಿ ನಡೆದ ಅಶೋಕನ ಕಳಿಂಗ ಯುದ್ಧಗಳನ್ನು ಅಣುಕಿಸುತ್ತಾ, ಸಮಾಜದ ಬಗೆಗಿನ ಪರಿಕಲ್ಪನೆಯನ್ನು ತಿದ್ದುವಲ್ಲಿ ಯಶಸ್ವಿಯಾಗುತ್ತಾರೆ. ಇದು ದೇವರಿಗೆ ಕೇಳಿದ ಆಳವಾದ ಪ್ರಶ್ನೆಯಾಗಿದೆ. ಪ್ರೇಮ ಅಥವಾ ಕಾಮಕ್ಕಾಗಿ ಅನೇಕರು ಜೀವವನ್ನು ತ್ಯಜಿಸಿದ್ದಾರೆ. ಪ್ರೇಮ ವಿಫಲವಾದಾಗ ಅಥವಾ ಪ್ರೇಯಸಿಗಾಗಿ ಅನೇಕ ಯುದ್ಧ ನಡೆದಿರುವ ಉದಾಹರಣೆಗಳಿವೆ.

ಭೂಮಿ, ನೆಲ, ಆಸ್ತಿಗಳಿಗೆ ಅನೇಕರು ಬಲಿಯಾಗಿದ್ದಾರೆ. ಜಾಗವನ್ನು ಉಳಿಸಿಕೊಳ್ಳಲು ಅಥವಾ ಗೆಲ್ಲಲು ರಾಜಕೀಯ ಮತ್ತು ಶೌರ್ಯದಿಂದ ಹಲವಾರು ಜನರು ಸತ್ತಿದ್ದಾರೆ. ಈ ವಿಚಾರಕ್ಕೆ ಎಷ್ಟೋ ಸಂಬಂಧಗಳು ಕಿತ್ತು ಹೋಗಿರುವ ಉದಾಹರಣೆಗಳಿವೆ. ಅಣ್ಣ ತಮ್ಮಂದಿರು ದಾಯಾದಿಗಳಾಗಿರುವ ಇತಿಹಾಸವಿದೆ. ಎಲ್ಲವೂ ತಾತ್ಕಾಲಿಕವೆಂದು ಹೇಳುತ್ತಾರೆ. ಹಣಕ್ಕಾಗಿ, ಸಂಪತ್ತಿಗಾಗಿ, ಬಡತನದಿಂದ ಹೊರಬರುವ ಆಸೆಗಾಗಿ ಅಥವಾ ಅಹಂಕಾರದಿಂದ ಲಕ್ಷಾಂತರ ಮಂದಿ ಬಲಿಯಾಗಿದ್ದಾರೆ. ಈ ಎಲ್ಲಾ ಐಶ್ವರ್ಯಕ್ಕಾಗಿ ಅನೇಕರು ಸಂಬಂಧವನ್ನೇ ದೂರ ಇಟ್ಟವರುಂಟು. ಇದೆಲ್ಲ ನಶ್ವರವೆಂದು ಅಲ್ಲಮಪ್ರಭು ಹೇಳುತ್ತಾರೆ.

ಆದರೆ ದೇವರಿಗಾಗಿ ಸಾಯುವವರನ್ನು ಇನ್ನು ನೋಡಿಲ್ಲ. ಇಷ್ಟಕ್ಕೆಲ್ಲ ಸಾಯುವ ಬದಲು ದೇವರಿಗಾಗಿ ಸತ್ತರೆ ಮುಕ್ತಿ ಖಚಿತ. ಶುದ್ಧ ಭಕ್ತಿ, ನಿಷ್ಠೆಯಿಂದ ತನ್ನ ಸ್ವಾರ್ಥ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಎಲ್ಲವನ್ನೂ ಬಿಟ್ಟು ನಿಮಗಾಗಿ ಸಾಯುವವರನ್ನು ಈವರೆಗೆ ನಾನು ನೋಡಲಿಲ್ಲ; ಎಂದು ಆಳವಾಗಿ ದೇವರನ್ನು ಪ್ರಶ್ನಿಸುತ್ತಾರೆ. ಮಾನವನು ತನ್ನ ಎಲ್ಲಾ ಭೌತಿಕ ಬಯಕೆಗಳಿಗೆ ತನ್ನ ಪ್ರಾಣವನ್ನು ತ್ಯಾಗ ಮಾಡಬಲ್ಲನು, ಆದರೆ ನಿಷ್ಕಾಮ ಭಕ್ತಿಯಿಂದ ನಿಜವಾದ ಆತ್ಮೋನ್ನತಿಗಾಗಿ ಜೀವ ನೀಡುವವರ ಸಂಖ್ಯೆ ಕಡಿಮೆ.

### ಪರಾಮರ್ಶನ ಗ್ರಂಥಗಳು:


1. ಮರಳಯ್ಯ ಸಾ.ಶಿ. (ಸಂ), (1993), ಅಕ್ಕನ ವಚನಗಳು, ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು.
2. ಹಿರೇಮಠ ಆರ್.ಸಿ. (ಸಂ.), (1968), ಅಮುಗೆ ರಾಯಮ್ಮನ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಹಿರೇಮಠ ಆರ್.ಸಿ. (ಸಂ.), (1968), ಅಕ್ಕಮ್ಮನ ವಚನಗಳುಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಗಿರಿರಾಜು ಪಿ.ಎಂ. (ಸಂ.), (1980), ಆಚರಣೆ ಸಂಬಂಧದ ವಚನಗಳು: ಸಂಪಾದನೆಯ ಸಿದ್ಧ ವೀರೇಶ್ವರ ದೇವರು, ಶರಣ ಸಂತಾನ ಪ್ರಕಾಶನ, ಮೈಸೂರು.
5. ವೀರಣ್ಣ ರಾಜೂರ, (1993), ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.